ಆ) 472

ಇ) ದಿನಾಂಕ : 03–05–2003ರಿಂದ ಜಾರಿಗೆ ತಂದಿದೆ.

ಈ) 'ಕಂಪು' ಯೋಜನೆಗೆ ಸಂಬಂಧಿಸಿದ ಖಾಸಗಿ ಸಂಸ್ಥೆಯನ್ನು ಹೊರತುಪಡಿಸಿ ಬೇರೆ ಯಾವುದೇ ಖಾಸಗಿ ಸಂಸ್ಥೆಯಿಂದ ತಲಾ 100 ರೂಪಾಯಿ ವಸೂಲು ಮಾಡಿರುವುದಿಲ್ಲ. ದಿನಾಂಕ :24–04–2004ಕ್ಕೆ 15.218 ನಿರುದ್ಯೋಗಿಗಳಿಂದ ವಸೂಲು ಮಾಡಲಾಗಿದೆ.

ಉ) ಬಂದಿದೆ

ಊ) 'ಕಂಪು' ಯೋಜನೆಯನ್ನು ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರು ನಗರದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ(ತಾಂತ್ರಿಕ), ಬೆಂಗಳೂರು ವಿಶಿಷ್ಠ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿ ಬೆಂಗಳೂರು ಮತ್ತು ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಮೈಸೂರು ಇವುಗಳನ್ನು ಉದ್ಯೋಗ ಪಾರ್ಕ್‌ಗಳನ್ನಾಗಿ ಪರಿವರ್ತಿಸಲು ಸರ್ಕಾರ ಆದೇಶ ಸಂಖ್ಯೆ:ಎಲ್ ಡಿ 55 ಇಟಿಎಕ್ಸ್ 2004 ದಿನಾಂಕ : 21–9–2004ರಲ್ಲಿ ಆದೇಶ ಹೊರಡಿಸಿದೆ.

754(200) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಖಾಲಿ ಇರತಕ್ಕ ತಹಶೀಲ್ದಾರ್ ಹುದ್ದೆಗಳ ಸಂಖ್ಯೆ ಎಷ್ಟು ;

ಆ) ಈ ಹುದ್ದೆಗಳನ್ನು ಸರ್ಕಾರವೇ ನೇರವಾಗಿ ನೇಮಕಾತಿ ಮಾಡಿ ಭರ್ತಿ ಮಾಡಲು ನಿರ್ಧರಿಸಿದೆಯೇ ;

ಇ) ಹಾಗಿದ್ದಲ್ಲಿ ಈ ನೇಮಕಾತಿಗಾಗಿ ಪಾಲಿಸಲಿರುವ ನೀತಿ ನಿಯಮಗಳೇನು;

ಈ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಈ ನೇಮಕಾತಿಗಳನ್ನು ಮಾಡಿಕೊಳ್ಳದೇ ಇರಲು ಕಾರಣಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) 170

ಆ) ಇಲ್ಲಿಯವರೆಗೆ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇಮಕಾತಿ ಆಗುತ್ತಿತ್ತು–ವಿಳಂಬವಾಗಿರುವುದರಿಂದ, ಸರ್ಕಾರ ನೇರ ನೇಮಕಾತಿಯ ಬಗ್ಗೆ ಕ್ರಮ ಕೈಗೊಳ್ಳುತ್ತಿದೆ.

ಇ) ವಿಶೇಷ ನಿಯಮಗಳನ್ನು ರಚಿಸಲಾಗುವುದು

ಈ) ಅತೀ ವಿಳಂಬ ಮತ್ತು ಇತರೇ ಸಮಸ್ಯೆಗಳು.

755(202) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ) : ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಸಂಚರಿಸುವ ವಾಹನಗಳ ಸಂಖ್ಯೆ 21 ಲಕ್ಷಕ್ಕೂ ಮೀರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೆಂಗಳೂರು ನಗರದಲ್ಲಿ ಹೆಚ್ಚಿನ ವಾಹನ ಸಂಚಾರದಿಂದ, ವಾಯು ಮಾಲಿನ್ಯ ಉಂಟಾಗಿ ವಾಹನ ಹೊರಸೂಸುವ ಹೊಗೆಯಿಂದ ಮಕ್ಕಳು ನಾನಾ ಖಾಯಿಲೆಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಗುರುಪಾದಪ್ಪ ನಾಗಮಾರ ಪಳ್ಳಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ. ಆದರೂ ಸಹ ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1) ಬೆಂಗಳೂರು ನಗರದ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಹಾಗೂ ವಿವಿಧ ಇಲಾಖೆಗಳೊಡನೆ ಸಮನ್ವಯಿಸಲು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕಾರ್ಯಪಡೆಯನ್ನು ರಚಿಸಲಾಗಿದೆ ಮತ್ತು ಕಾರ್ಯನಿರ್ವಹಿಸುತ್ತಿದೆ.

2) ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸರ್ಕಾರವು ಬೆಂಗಳೂರು ನಗರದ ವಾಯುಗುಣ ಸುಧಾರಣೆ(ಹೊರ ವರ್ತುಲ ರಸ್ತೆ ಪರಿಮಿತಿಯೊಳಗೆ) ಕುರಿತಂತೆ ಕ್ರಿಯಾ ಯೋಜನೆಯನ್ನು ರೂಪಿಸಿದೆ. ಈ ಕ್ರಿಯಾ ಯೋಜನೆಯನ್ನು ಸಂಬಂಧಪಟ್ಟ ಇಲಾಖೆಗಳು ಅನುಷ್ಠಾನಗೊಳಿಸುತ್ತಿವೆ.

3) ಬೆಂಗಳೂರು ನಗರದಲ್ಲಿ ಎಲ್.ಪಿ.ಜಿ. ಬಳಕೆಯನ್ನು ಉತ್ತೇಜಿಸಲು 13,730 ಆಟೋರಿಕ್ಷಾಗಳಿಗೆ ಎಲ್.ಪಿ.ಜಿ. ಕಿಟ್‌ಗಳನ್ನು ಅಳವಡಿಸಲಾಗಿದೆ. ಹೊಸದಾಗಿ ನೋಂದಣಿ ಆಗಬೇಕಾದ ಆಟೋರಿಕ್ಷಾಗಳು ದ್ವಿ-ಇಂಧನ ಪದ್ಧತಿ(ಎಲ್.ಪಿ.ಜಿ. ಮತ್ತು ಪೆಟ್ರೋಲ್) ಯಲ್ಲಿರುವುದನ್ನು ಕಡ್ಡಾಯಗೊಳಿಸಲಾಗಿದೆ.

4) ಬೆಂಗಳೂರು ನಗರದಲ್ಲಿರುವ 238 ಎಮಿಷನ್ ಟೆಸ್ಟಿಂಗ್ ಕೇಂದ್ರಗಳಲ್ಲಿ 230 ಅನ್ನು ಗಣಕೀಕರಣಗೊಳಿಸಲಾಗಿದೆ.

5) ಇಂಧನ ಕಲಬೆರಕೆಯನ್ನು ನಿಯಂತ್ರಿಸಲು ಸಾರಿಗೆ ಇಲಾಖೆ ಆಹಾರ ನಾಗರೀಕ ಸರಬರಾಜು ಇಲಾಖೆ, ಪೊಲೀಸ್ ಇಲಾಖೆ ಹಾಗೂ ತೈಲ ಕಂಪನಿಗಳು ಜಂಟೀ ಪರಿವೀಕ್ಷಣೆಯನ್ನು ಕೈಗೊಳ್ಳುತ್ತಿವೆ.

6) ಇಂಧನ ಕಲಬೆರೆಕೆಯನ್ನು ನಿಯಂತ್ರಿಸಲು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್‌ನೊಡನೆ ಪೂರ್ವ ಮಿಶ್ರಿತವಾದ 2-T ತೈಲವನ್ನು ಮಾತ್ರ ವಿತರಿಸುವಂತೆ ಸರ್ಕಾರವು ಅಧಿಸೂಚನೆ ಹೊರಡಿಸಿದೆ. ವಾಹನ ಸೇವಾ ಗ್ಯಾರೇಜುಗಳಲ್ಲಿ 2 ಸ್ಟ್ರೋಕ್ ಇಂಜಿನ್ ವಾಹನಗಳ ಉಪಯೋಗಕ್ಕಾಗಿ ಬಿಡಿ 2-T ತೈಲವನ್ನು ಮಾರಾಟ ಮಾಡುವುದನ್ನು ನಿಷೇದಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

7) ಪ್ರಸ್ತುತದಲ್ಲಿ 9 ಆಟೊ ಎಲ್‌ಪಿಜಿ ವಿತರಣಾ ಬಂಕ್‌ಗಳನ್ನು ಸ್ಥಾಪಿಸಲಾಗಿದ್ದು ಮಾರ್ಚ್ 2005ರ ಒಳಗೆ ಇನ್ನೂ ಇಂತಹ 5 ಬಂಕ್‌ಗಳು ಸ್ಥಾಪಿತವಾಗಲಿವೆ.

8) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಎರಡು ಆನ್‌ಲೈನ್ ವಾಯು ಗುಣ ಮಟ್ಟ ಮಾಪನ ಸ್ಟೇಷನ್ ಅನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳುತ್ತಿದೆ.

9) ಉದ್ದಿಮೆಗಳಲ್ಲಿ 0.05% ಗಂಧಕಯುಕ್ತ ಡೀಸಲನ್ನು ಡೀಸೆಲ್ ಜನರೇಟರ್‌ಗಳಲ್ಲಿ ಕಡ್ಡಾಯವಾಗಿ ಬಳಸುವಂತೆ ಆದೇಶ ಹೊರಡಿಸಿದೆ.